ನಿನ್ನ ತಮ್ಮದೀರು ಶೂರರು ಅವರನ್ನ ಯಾರೂ ಗೆಲ್ಲಕಾಗಲ್ಲ. ಶತ್ರುವನ್ನ ಸವರಿ ಬಿಡುತ್ತಾರೆ ಅವರು.

ಅರ್ಜುನ ಭೀಮ ಅಂದರೆ ವಾಯು ಅಗ್ನಿಗೆ ಸಮನಾದ ತೇಜಸ್ವಿರೋರು ಮಾದ್ರೀ ಮಕ್ಕಳೇನು ಕಡಮೆ ದೇವರಾಜನಷ್ಟೇ ತಾಕತ್ತಿರೋರು.

ಜೊತೆಗೆ ನಾನು ನಿಮ್ಮ ಗೆಳೆಯ. ನನಗೇ ಅಪ್ಪಣೆ ಕೊಡು ಭೀಷ್ಮನ ಜೊತೆ ಯುದ್ಧ ಮಾಡೋಕೆ. ನೀನು ಯುದ್ಧದಲ್ಲಿ ಇಂಥದು ಮಾಡು ಅಂದರೆ ನಾನು ಇಲ್ಲ ಅಂತೀನಾ?

ಫಲ್ಗುಣ ಕೊಲ್ಲಲ್ಲ ಅಂತಂದರೆ ನಾನೇ ಆ ಪುರುಷ ಶ್ರೇಷ್ಠನನ್ನು ಧೃತರಾಷ್ಟ್ರನ ಮಕ್ಕಳ ಕಣ್ಮುಂದೇನೇ ಕರೆದು ಕೊಂದು ಹಾಕತೀನಿ.

ಅವನೊಬ್ಬ ಸತ್ತುಬಿಟ್ಟರೆ ಜಯ ನಿಮ್ಮದು ಅಂತ ನೀನು ತಿಳಿಯೋದಾದರೆ ಯಾರೂ ಬೇಡ, ನಂದೊಂದು ರಥ ಸಾಕು, ಈಗಲೇ ಕುರುವೃದ್ಧನನ್ನು ಆ ನಿಮ್ಮ ತಾತನ್ನಕೊಂದುಹಾಕಿ ಬರತೇನೆ. ಬೇಕಾದರೆ ನಾಳೇನೇ ನನ್ನ ಪರಾಕ್ರಮ ನೋಡತೀಯಂತೆ. ಎಷ್ಟೋ ಮಹಾಸ್ತ್ರಗಳನ್ನು ನನ್ನ ಮೇಲೆ ಸುರೀಲಿ ಅವನು. ಅವನ ಜೀವ ತೆಗೆದು ರಥದಿಂದ ಕೆಳಕ್ಕೆ ಕೆಡವತೀನಿ.

ಪಾಂಡುವಿನ ಮಕ್ಕಳಿಗೆ ಶತ್ರು ಆದವರು ನನಗೂ ಶತ್ರೂನೇ ಅದರಲ್ಲಿ ಎರಡು ಮಾತೇ ಇಲ್ಲ.

ನನಗೆ ಸೇರಿದವರು ನಿನಗೂ ಸೇರಿದವರು

ನನದೇನಿದೆಯೋ ಅದೆಲ್ಲಾ ನಿಮ್ಮದೂನೂ

ನಿನ್ನ ತಮ್ಮ ನನಗೆ ಗೆಳೆಯ, ನಂಟ, ಶಿಷ್ಯ ಕೂಡ. ಅವನಿಗಂತಂದರೆ ನನ್ನ ಮೈಯಿಂದ ಮಾಂಸನಾದರೂ ಕತ್ತರಿಸಿ ಕೊಟ್ಟುಬಿಡತೀನಿ. ಅವನೂ ಅಷ್ಟೇ, ನನಗೋಸ್ಕರ ಜೀವ ಬಿಡೋಕೂ ಸಿದ್ಧನೆ. ಇದು ನಮ್ಮ ನಂಟಿನ ಗುಟ್ಟು. ಒಬ್ಬರು ಇನ್ನೊಬ್ಬರನ್ನ ದಾಟಿಸಿಕೋತೀವಿ.

ನನ್ನ ಪಾಲಿಗೆ ನೀನು ರಾಜರಲ್ಲಿ ರಾಜ ನನ್ನನ್ನ ಯುದ್ಧಕ್ಕೆ ಕಳಿಸು. ನಾನು ನಿನ್ನ ಸಿಪಾಯಿ ಆಗತೀನಿ

ಈ ಹಿಂದೆ ಅರ್ಜುನ ಉಪಪ್ಲಾವ್ಯ ಪುರದ ಜನಗಳೆದುರು ಮಾತು ಕೊಟ್ಟಿದಾನೆ ಗಾಂಗೇಯನ್ನ ಕೊಲ್ಲತೀನಿ ಅಂತ ಅವನ ಮಾತನ್ನೂ ನಾವೆಲ್ಲ ಕಾಪಾಡಬೇಕು. ಆದರೆ ನನಗೇ ವಹಿಸೋದಾದರೆ ಅವನು, ಅವನ ಪರವಾಗಿ ನಾನೇ ಯುದ್ಧಕ್ಕೆ ಹೋಗತೀನಿ. ಆದರಿದು ಅರ್ಜುನ ನಿಂತರೆ ಆಗದ ಕೆಲಸವೇ ಇಲ್ಲ. ಸ್ವತಃ ದೇವತೆಗಳೇ ರಾಕ್ಷಸರು ದೈತ್ಯರನ್ನು ಕಟ್ಟಿಕೊಂಡು ಬಂದರೂ ಲೆಕ್ಕಕ್ಕಿಡದವನು ಇನ್ನು ಭೀಷ್ಮ ಯಾವ ಲೆಕ್ಕ?

ಆ ಶಂತನುವಿನ ಮಗನಿಗೋ ಈಗ ಬುದ್ಧಿ ತಿರಗಾಮುರಗಾ ಆಗಿದೆ. ತಾಕತ್ತು ಕಡಿಮೆ ಆಗಿದೆ. ಅವನ ಆಯಸ್ಸೂ ತೀರತಾ ಇದೆ. ಅವನ ಕರ್ತವ್ಯ ಏನು ಅನ್ನೋದೂ ಅವನಿಗೆ ತಿಳೀತಾ ಇಲ್ಲ.

**ಯುಧಿಷ್ಠಿರ:** ಅದೇನೇ, ಅದೇನೇ. ನೀ ಹೇಳಿದ್ದೇ ಸರಿ

ಮಾಧವ, ಮಹಾಬಾಹೂ ಇವರೆಲ್ಲ ಒಟ್ಟಿಗೆ ಬಂದರೂ ನಿನ್ನ ಬಿರುಸು ತಡೆಯಲಾರರು.

ನೀನು ಯಾವ ಕಡೆ ಇರತೀಯೋ ಅವರ ಆಸೆಯೆಲ್ಲಾ ಕೈಗೂಡಿದ ಹಾಗೇ. ಖಂಡಿತ ನೀನು ಕಾಪಾಡಲು ಕಾವಲು ನಿಂತರೆ ದೇವೇಂದ್ರ ದೇವತೆಗಳನ್ನು ಕಟ್ಟಿಕೊಂಡು ಬಂದರೂ ಇಲ್ಲ, ಇನ್ನು ಭೀಷ್ಮ ಯಾವ ಲೆಕ್ಕ, ಬಿಡು.

ಆದರೆ ನೋಡು

ನಿನ್ನನ್ನು ಸುಳ್ಳುಗಾರ ಮಾಡೋಕೆ ನನಗೆ ಇಷ್ಟ ಇಲ್ಲ

ಯುದ್ಧ ಮಾಡಲ್ಲಬರೀ ಸಹಾಯ ಮಾಡತೀನಿ ಅಂದಿದೀಯ ಆ ಮಾತು ಉಳಿಸಿಕೋ.

ನನಗೂ ಭೀಷ್ಮನಿಗೂ ಯುದ್ಧದಲ್ಲಿ ಒಂದು ಒಪ್ಪಂದ ಆಗಿದೆ:

‘ಏನಾದರೂ ನಿನ್ನ ಪರವಾಗಿ ಯುದ್ಧ ಮಾಡಲ್ಲ, ದುರ್ಯೋಧನನ ಪರವಾಗಿ ಯುದ್ಧ ಮಾಡತೀನಿ. ಆದರೆ ಸಮಯ ಬಂದಾಗ ಸತ್ಯವಾಗಲೂ ಸಲಹೆ ಹೇಳತೀನಿ’ ಅಂದಿದಾನೆ ಪ್ರಭೂ.

ಮಾಧವಾ ಅವನೇ ನಮಗೆ ರಾಜ್ಯ ಕೊಡೋನು ಅದಕ್ಕೆ ದಾರಿ ಅವನೇ ತೋರಿಸ್ತಾನೆ.

ನೀನೂ ಬಾ, ಒಟ್ಟಿಗೆ ಹೋಗಿ ದೇವವ್ರತನನ್ನ

ಅವನನ್ನು ಕೊಲ್ಲೋ ದಾರಿ ಯಾವುದು ಅಂತ ಕೇಳಣ

ಅವನು ನಮಗೆ ಹಿತವಾದದ್ದನ್ನೇ ಹೇಳತಾನೆ

ಅವನು ಏನು ಹೇಳತಾನೋ ಅದನ್ನೆ ಯುದ್ಧದಲ್ಲಿ ಮಾಡಣ.

ಹೇಳಿದ ಮಾತನ್ನ ದೃಢವಾಗಿ ನಡೆಸೋನು ಅವನು

ಆಗ ನಾವು ಎಳೆ ಹುಡುಗರು. ತಂದೆ ಇಲ್ಲದ ತಬ್ಬಲಿಗಳು. ಅವನೇ ನಮ್ಮನ್ನ ಬೆಳೆಸಿದೋನು. ಈಗಲೂ ನಮಗೆ ಗೆಲವನ್ನ, ಗೆಲವಿಗೆ ದಾರೀನ ತೋರಿಸೋನೂ ಅವನೇನೇ

ಮಾಧವಾ, ಅವನು ನಮ್ಮ ತಾತ ಅಪ್ಪನಿಗಿಂತ ಹೆಚ್ಚಾದವನು ಅವನನ್ನ ಕೊಲ್ಲೋಕೆ ಬಯಸತಾ ಇದೀನಲ್ಲ ತ್ಥು ಈ ಕ್ಷತ್ರಿಯ ಜನ್ಮಕಿಷ್ಟು. ■

